**2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.**

**ಓ ಎಸ್ ನಂ.462-2016                                ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮರಿಸ್ವಾಮಿ<br>ಹಳ್ಳಿದಿಡ್ಡಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 03-08-2024. |

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎನ್.ಎಸ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ವಾದಿ ಮತ್ತು ಅವರ ತಮ್ಮ ಹೇಳಿ ಬರೆಸಿರುತ್ತಾರೆ. ನನಗೆ ಚಿನ್ನಸ್ವಾಮಿ ಉ ಹುಚ್ಚಯ್ಯ ನನಗೆ ಭಾವ ಮೈದುನನಾಗಬೇಕು. ಚಿನ್ನಸ್ವಾಮಿ ರವರ ಮರಣಾ ನಂತರ ಅವರ ಹೆಂಡತಿ ಪ್ರತಿವಾದಿಗಳು ಮತ್ತು ಅವರ ತಾಯಿ ಮತ್ತು ಎಸ್.ಐ.ಪಿ.ಎಂ ಕಾರ್ಖಾನೆ ವಿರುದ್ಧ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಸದರಿ ದಾವೆಯನ್ನು ವಾದಿಯವರ ತಾಯಿ ಮತ್ತು ಪ್ರತಿವಾದಿಗಳು ಮತ್ತು ಅವರ ಕುಟುಂಬದವರು ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯನ್ನು ರಾಜಿ ಮಾಡಿಕೊಂಡು ಸಮಯ ಒಂದು ಪತ್ರ ಮಾಡಿಕೊಂಡಿದ್ದು, ಸದರಿ ಪತ್ರಕ್ಕೆ ನಾನು ಮತ್ತು ಹೆಚ್.ಎಂ.ಪುಟ್ಟಸ್ವಾಮಿ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇವೆ ಎಂದರೆ ಸರಿ. ವಾದಿಯವರು ತಾಯಿಯವರು ಚಿನ್ನಸ್ವಾಮಿ ರವರ ಕುಟುಂಬದವರ ವಿರುದ್ಧ ದಾವೆಯನ್ನು ಹೂಡಿದ ಸಮಯ, ಈ ವಾದಿಗಳು ಅಪ್ರಾಪ್ತ ವಯಸ್ಕರು ಎಂದರೆ ಸರಿ. ವಾದಿಗಳ ತಾಯಿಯವರು ಚಿನ್ನಸ್ವಾಮಿ ರವರ ಪಿತ್ರಾರ್ಜಿತ ಸ್ವತ್ತು ಮತ್ತು ಪೇಪರ್ ಮಿಲ್ ಬರುವ ಹಣದಲ್ಲಿ 3/6 ಭಾಗ ಭಾಗಾಂಶ ಕೋರಿ ದಾವೆಯನ್ನು ಸಲ್ಲಿಸಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ವಾದಿಗಳು ತಾಯಿಗಳ ತಾಯಿಯವರು ದಾವೆಯನ್ನು ಸಲ್ಲಿಸಿದ್ದು ನಿಜ, ಅದರೆ ಅವರು ಆಸ್ತಿಗಳಲ್ಲಿ ಭಾಗ ಕೇಳಿದ್ದಾರೆಯೇ ಇಲ್ಲವೆ ಎಂಬುದರ ಬಗ್ಗೆ

ಗೊತ್ತಿಲ್ಲ. ಆದರೆ ಪೇಪರ್ ಮಿಲ್ ನಿಂದ ಬರಬೇಕಾದ ಹಣದ ಸಂಬಂಧ ದಾವೆ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ವಾದಿಗಳ ತಾಯಿಯವರು ದಾವೆಯನ್ನು ದಾಖಲಿಸಿದ ಒಂದು ವರ್ಷಗಳ ನಂತರ ಅಂದರೆ ದಿ.03-07-1996 ರಂದು ದಾವೆಯನ್ನು ರಾಜಿ ಮಾಡಿಕೊಂಡು, ರಾಜಿ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿ ವಾಪಸ್ಸು ಪಡೆದಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪೇಪರ್ ಮಿಲ್‌ನಿಂದ ಬರಬೇಕಾದ ಪರಿಹಾರಕ್ಕೆ ಸಂಬಂಧಿಸಿದಂತೆ ರೂ.25,000/- ಗಳಿಗೆ ರಾಜಿಯಾದ್ದರಿಂದ ದಾವೆಯನ್ನು ವಾಪಸ್ಸು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯವರ ತಾಯಿಯವರು ಒಟ್ಟು ಕುಟುಂಬದಿಂದ ತನಗೆ ಬರಬೇಕಾದ 3/6 ಭಾಗದ ಆಸ್ತಿಗಳು ಹಾಗೂ ಪೇಪರ್ ಮಿಲ್‌ನಿಂದ ಬರಬೇಕಾದ ಪರಿಹಾರದ ಬಾಬ್ತು ರೂ.25,000/- ಗಳನ್ನು ಪಡೆದುಕೊಂಡು ದಾವೆಯನ್ನು ರಾಜಿ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ.

2. ನನ್ನ ಪತ್ನಿ ಮಾಯಮ್ಮ 2 ನೇ ಪ್ರತಿವಾದಿ ರವರ ಕುಟುಂಬದ ವಿರುದ್ಧ ಭಾಗಾಂಶಕ್ಕಾಗಿ ದಾವೆ ಹೂಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾವೆಯೂ ಇನ್ನೂ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಪತ್ನಿಯವರು ಈ ಹಿಂದೆ 2 ನೇ ಪ್ರತಿವಾದಿ ರವರ ಕುಟುಂಬದ ವಿರುದ್ಧ ಭಾಗಾಂಶಕ್ಕಾಗಿ ಹೂಡಿದ ದಾವೆಯನ್ನು ತಾನು ಹಣವನ್ನು ಪಡೆದುಕೊಂಡು ರಾಜಿ ಮಾಡಿಕೊಂಡಿರುವುದಾಗಿ ದಾವೆಯನ್ನು ವಾಪಸ್ಸು ಪಡೆದಿದ್ದದ್ದರಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ಆ ರೀತಿ  ರಾಜಿ ಅರ್ಜಿಯನ್ನು ಸಲ್ಲಿಸಿದ್ದು ನಿಜ, ಆದರೆ ಪ್ರತಿವಾದಿಗಳು ನನ್ನ ಪತ್ನಿಗೆ ಯಾವುದೇ ಹಣವನ್ನು ನೀಡಿರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಆ ರೀತಿ ಹಣ ನೀಡದೇ ಇದ್ದುದ್ದರಿಂದ ನನ್ನ ಪತ್ನಿ ಬೇರೆ ಸರ್ವೇ ನಂಬರ್ ಬಾಬ್ತು ಮತ್ತೊಂದು ದಾವೆಯನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಮಗೂ ಮತ್ತು ಪ್ರತಿವಾದಿಗಳ ಕುಟುಂಬದವರಿಗೂ ದ್ವೇಷವಿರುವ ಕಾರಣ ನಾವು ವಾದಿಯವರ ಮುಖೇನ ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು

ದಾಖಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ, ನನಗೆ ಪ್ರತಿವಾದಿಗಳ ಮೇಲೆ ಇರುವ ದ್ವೇಷದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**